ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕಗೋಪುರ, ಮೂರನೇ ಮಹಡಿ,
ಡಾ॥ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ
E-mail ID:icps.kar@gmail.com Phone No: 080-22867381/2/3

ಸಂಖ್ಯೆ: ಕೆಎಸ್ಐಸಿಪಿಎಸ್/ಐಇಸಿ/ಹೆ.ಬ/43/2020-21 ದಿನಾಂಕ: 06-11-2021

ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ನಂ.17, ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ,
ಬೆಂಗಳೂರು.

ಮಾನ್ಯರೇ,

ವಿಷಯ: ಸುಧಾರಣಾ ಸಂಸ್ಥೆಗಳು/ಕರೆಕ್ಷನಲ್ ಹೋಮ್ಸ್ ಎಂದು ಸಂಬೋಧಿಸುವ ಬದಲು ಮಕ್ಕಳ ಪಾಲನಾ ಸಂಸ್ಥೆಗಳು ಎಂದು ಸಂಬೋಧಿಸಲು ಹೆಚ್ಚಿನ ಪ್ರಚಾರ ನೀಡುವ ಬಗ್ಗೆ.

ಉಲ್ಲೇಖ: ಕೆಎಸ್ಐಸಿಪಿಎಸ್/ಐಇಸಿ/ಹೆ.ಬ/43/2020-21 ದಿನಾಂಕ: 22-12-2020

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಕ್ಕಳ ರಕ್ಷಣಾ ನಿರ್ದೇಶನಾಲಯವು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015ನ್ನು ಅನುಷ್ಠಾನಗೊಳಿಸುತ್ತಿದ್ದು ಸದರಿ ಕಾಯ್ದೆ ಅನುಸಾರ ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಕ್ಕಳಿಗೆ ಬಾಲಾಪರಾಧಿಗಳು ಎಂದು ಮಕ್ಕಳ ಪಾಲನಾ ಸಂಸ್ಥೆಗಳನ್ನು ಸುಧಾರಣಾ ಸಂಸ್ಥೆಗಳು (ಕರೆಕ್ಷನಲ್ ಹೋಮ್ಸ್) ಎಂದೂ ಕರೆಯುವುದು ಕಾನೂನು ಬಾಹಿರವಾಗಿರುತ್ತದೆ.

ಆದ್ದರಿಂದ ಬಾಲಾಪರಾಧಿಗಳು ಎಂದು ಸಂಬೋಧಿಸುವ ಬದಲು "ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಕ್ಕಳು" ಎಂದೂ ರಿಮಾಂಡ್ ಹೋಂ ಎನ್ನುವ ಬದಲು ವೀಕ್ಷಣಾಲಯ ಎಂದೂ ಹಾಗೂ ಸುಧಾರಣಾ ಸಂಸ್ಥೆಗಳು/ಕರೆಕ್ಷನಲ್ ಹೋಮ್ಸ್ ಎಂದು ಸಂಬೋಧಿಸುವ ಬದಲು "ಮಕ್ಕಳ ಪಾಲನಾ ಸಂಸ್ಥೆಗಳು" ಎಂದೂ ಸಂಬೋಧಿಸಲು ಎಲ್ಲಾ ಮಾಧ್ಯಮಗಳಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅರಿವು ಮೂಡಿಸಲು ಉಲ್ಲೇಖ(1)ರ ಪತ್ರದಲ್ಲಿ ಕೋರಲಾಗಿತ್ತು ಆದಾಗ್ಯೂ ಪತ್ರಿಕೆಗಳಲ್ಲಿ ಬಾಲಾಪರಾಧಿಗಳು ಎಂಬುದಾಗಿ ತಪ್ಪಾಗಿ ಪ್ರಕಟಿಸುವುದು ಮತ್ತೆ ಮತ್ತೆ ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಗೆ ವಿವರಿಸಿರುವಂತೆ

| ಕ್ರ.ಸಂ | ಸಂಬೋಧಿಸುತ್ತಿರುವ ಪದ | ಬದಲಾಗಿ ಸಂಬೋದಿಸಬೇಕಾದ ಪದ |
|---|---|---|
| 1 | ಬಾಲಾಪರಾಧಿಗಳು | "ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಕ್ಕಳು" |
| 2 | ರಿಮಾಂಡ್ ಹೋಂ | ವೀಕ್ಷಣಾಲಯ |
| 3 | ಸುಧಾರಣಾ ಸಂಸ್ಥೆಗಳು/ಕರೆಕ್ಷನಲ್ ಹೋಮ್ಸ್ | "ಮಕ್ಕಳ ಪಾಲನಾ ಸಂಸ್ಥೆಗಳು" |

ಎಂಬುದಾಗಿ ಸಂಬೋದಿಸಲು ಹೆಚ್ಚಿನ ಪ್ರಚಾರ ನೀಡಬೇಕಾಗಿರುವುದರಿಂದ ಹಾಗೂ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ಅನುದಾನದ ಕೊರತೆ ಇರುವುದರಿಂದ ತಮ್ಮ ಇಲಾಖೆಯಿಂದ ಎಲ್ಲಾ ಪತ್ರಿಕಾ ಮಾಧ್ಯಮಗಳಿಗೆ, ಶ್ರವಣ ಮಾಧ್ಯಮಗಳಿಗೆ ಮತ್ತು ದೃಶ್ಯ ಮಾಧ್ಯಮಗಳಿಗೆ ಈ ಕುರಿತಂತೆ ಮಾಹಿತಿ ನೀಡಲು ಹಾಗೂ "Note Press" ವಿಭಾಗದಲ್ಲಿ ಪ್ರಕಟಣೆ ನೀಡಲು ಕೋರಲಾಗಿದೆ.(ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ವಿಷಯದ ಪ್ರತಿ ಲಗತ್ತಿಸಿದೆ).

ತಮ್ಮ ವಿಶ್ವಾಸಿ,

06.11.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.